ಗಂಟೆಯಲ್ಲಿ ತರಾತುರಿಯಲ್ಲಿ ಇಡೀ ದಿನಕ್ಕಾಗುವಷ್ಟು ಪಲಾವ್, ಟೊಮೆಟೊ ರೈಸ್ ಅಥವಾ ಪುಳಿಯೋಗರೆ ಮಾಡಿ, ಉಳಿದ ಹೊತ್ತೆಲ್ಲಾ ರೂಮಿನಲ್ಲೇ ಕಳೆಯತೊಡಗಿದ. ರೂಮಿನ ಗಲೀಜು ಜಾಲರಿಗಳ ಮೂಲಕ ಪಡೆದ ಸೀಮಿತ ಗಾಳಿ ಬೆಳಕೇ ಅವನಿಗೆ ಉಸಿರಾಯ್ತು. ಯಾಕೋ ಮೊದಲಿಗೆ ಬೇಸಿಗೆರಜೆಯಂತೆ ಖುಷಿಕೊಟ್ಟ ಲಾಕ್‌ಡೌನ್ ಎರಡು ಮೂರು ವಾರಗಳಲ್ಲಿಯೇ ರಾಜೇಶನಿಗೆ ಜೈಲುವಾಸದಂತೆ ಭಾಸವಾಯಿತು. ಇಷ್ಟಲ್ಲದೆ ಅಡಿಗೆಮನೆಯಲ್ಲಿ ಮೂಲೆಯಲ್ಲಿದ್ದ ಚಿಕ್ಕ ಸಿಂಕ್‌ನಲ್ಲಿ ಆಗಾಗ ಏನಾದರೂ ಸಿಕ್ಕಿಕೊಂಡು ನೀರು ಸಲೀಸಾಗಿ ಹೋಗದೇ ಕಟ್ಟಿಕೊಂಡು, ಕೆಲವೊಮ್ಮೆ ಪೊರಕೆ ಕಡ್ಡಿ ತೂರಿಸಿ ಕಳಿಸಬೇಕಾಗಿತ್ತು. ಆದರೆ, ಈಗ ಈ ಸಿಂಕ್ ಪೈಪುಗಳ ಬಳಿಯೇ ಹಲ್ಲಿ ಆ ಬೆಳಗ್ಗೆ ಓಡಿಹೋಗಿದ್ದನ್ನು ರಾಜೇಶ ಕಂಡಿದ್ದ! ಪೈಪಿನೊಳಗೆ ಕಟ್ಟಿಕೊಳ್ಳುವುದಕ್ಕೆ ಈ ಹಳೆಯ ಕಟ್ಟಡದ ವಿನ್ಯಾಸವನ್ನು ಮೊದಲು ದೂಷಿಸುತ್ತಿದ್ದವನು ಇದೀಗ ಅದಕ್ಕೂ ಹಲ್ಲಿ ಕಾರಣವೇನೋ ಎಂದು ಯೋಚಿಸಿದ. ಪೈಪಿನ ಒಳಗಿಂದ ಅಥವಾ ಹೊರಗಿನ ತೇವಾಂಶ ನೆಕ್ಕಿಕೊಂಡೇ ನೀರಡಿಕೆ ಪೂರೈಸಿಕೊಳ್ಳುತ್ತೋ ಏನೋ... ಆದ್ದರಿಂದ ಪೊರಕೆಕಡ್ಡಿ ತೂರುವಾಗ ಕೆಳಗಿಂದ ಹಲ್ಲಿಯೇ ಗಾಬರಿಯಾಗಿ ಹೊರಬಂದು ತನ್ನ ಕಾಲಿನ ಮೇಲೆಲ್ಲಾ ಹರಿದಾಡಿಬಿಡತ್ತೇನೋ ಎಂದು ಭಯವಾಗಿ, ಸಿಂಕ್ ಕಟ್ಟಿಕೊಂಡಾಗೆಲ್ಲಾ ರಾಜೇಶ ತಾನೂ ಕಟ್ಟೆಯ ಮೇಲೆ ಕುಪ್ಪಳಿಸಿ, ಸಿಂಕ್ ಪಕ್ಕದಲ್ಲಿ ಕೂತು ಕ್ಲೀನ್ ಮಾಡುವ ಸಾಹಸದಲ್ಲಿ ತೊಡಗಿದ. ತನ್ನಂತೆಯೇ ಹಲ್ಲಿಯೂ ಒಂದು ಮಾನಸಿಕ ಬೇಲಿ ಹಾಕಿಕೊಂಡು ಅದರೊಳಗೇ ಇದ್ದುಬಿಡಲಿ ಎಂದು ಆಶಿಸುತ್ತಾ ದಿನಾರಾತ್ರಿ ಮಲಗುತ್ತಿದ್ದ. ಬಹುಶಃ ಅದು ದಿನವೂ ಕಣ್ಣಿಗೆ ಕಾಣಿಸಿಕೊಂಡಿದ್ದರೆ ಅದರ ಉಪಸ್ಥಿತಿ ಮನೆಯ ಯಾವ ಭಾಗದಲ್ಲಿದೆ ಎಂಬುದು ತಿಳಿದು ಸ್ವಲ್ಪ ನಿರಾಳವಾಗುತ್ತಿದ್ದನೋ ಏನೋ. ಆದರೆ, ಹಲ್ಲಿಯೂ ಭಯದಿಂದ ಮರೆಯಲ್ಲಿರುವುದು ಹೊಂಚುಹಾಕುವ ಶತ್ರುವಿನಂತೆ ರಾಜೇಶನಿಗೆ ತೋರಿತ್ತು.

‘‘ಅದೇನು ಮಾಡತ್ತೆ ಅಂತ ಅದಕ್ಕೆ ಹೆದರ್ತೀಯ ಬಿಡೋ...’’ ಅಂತ ರಾಜೇಶ ಚಿಕ್ಕಂದಿನಲ್ಲಿ ಹಲ್ಲಿ ನೋಡಿ ಬೆಚ್ಚಿದಾಗೆಲ್ಲಾ ಅವನಪ್ಪ ಗದರುತ್ತಿದ್ದರು. ಹೆದರಿಕೆ ಅಲ್ಲ ಅಪ್ಪ, ಏನೋ ಒಂಥರಾ ಅಸಹ್ಯ ಎಂಬ ಮಾತನ್ನು ರಾಜೇಶ ನುಂಗಿಕೊಂಡು ಸುಮ್ಮನಾಗುತ್ತಿದ್ದ. ಬಹಳ ಹಿಂದೆಯೇ ಪತ್ನಿಯನ್ನು ಕಳೆದುಕೊಂಡ ಅವನಪ್ಪನ ಒಲವು ಒತ್ತಾಸೆಗಳೂ ಗದರಿಕೆಯ ರೂಪದಲ್ಲಿಯೇ ಇದ್ದವು. ಅವರ ಉದ್ಯೋಗವೂ ಕೆನರಾ ಬ್ಯಾಂಕಿನಲ್ಲಿಯೇ ಇದ್ದದ್ದರಿಂದ ರಾಜೇಶ ಕೆಲವು ವರ್ಷ ಅವರು ವರ್ಗಾವಣೆಯಾದ ಊರಿನಲ್ಲಿಯೂ ಉಳಿದಕಾಲ ಹಾಸ್ಟೆಲ್‌ಗಳಲ್ಲಿಯೂ ಕಳೆದಿದ್ದ. ಹೀಗಾಗಿ ಅವನಿಗೆ ದಶಕಗಳ ಕಾಲ ಉಳಿಯಬಹುದಾದ ಗೆಳೆಯರೇ ಸಿಗಲಿಲ್ಲ. ಆದರೂ ಅಪ್ಪನ ಆಣತಿಯಂತೆಯೇ ಐಬಿಪಿಎಸ್ ಪರೀಕ್ಷೆ ಬರೆದು ಕೆನರಾ ಬ್ಯಾಂಕಿನಲ್ಲಿಯೇ ಕೆಲಸ ಗಿಟ್ಟಿಸಿದಾಗ, ಕೊನೆಗೂ ಅವರ ದನಿಯಲ್ಲಿ ಹೆಮ್ಮೆ ಗುರುತಿಸಿದ್ದ. ಅಷ್ಟರಲ್ಲಿ ಅಪ್ಪ ತಮ್ಮ ಯೋಜನೆಯಂತೆ ವಿಆರ್‌ಎಸ್ ಪಡೆದು, ಬೆಂಗಳೂರಿನ ತಮ್ಮ ಹಳೆಯ ಮನೆ ಸಿದ್ಧಪಡಿಸಿಕೊಂಡು, ಗೆಳೆಯ ಮೂರ್ತಿಯ ಜೊತೆ ಷೇರು ವ್ಯವಹಾರ ಮಾಡುತ್ತಾ ಕಾಲ ಹಾಕುತ್ತಿದ್ದರು. ರಾಜೇಶನ ವರ್ಗಾವಣೆಯ ಸಂದರ್ಭ ಬಂದಾಗ, ‘‘ಒಳ್ಳೇದು, ಹೋಗು. ಮನುಷ್ಯ ಒಂದೇ ಕಡೆ ಇರಬಾರದು, ಬುದ್ಧಿ ಬೆಳೆಯಲ್ಲ. ನಂಗೆ ಒಬ್ಬನೇ ಇರೋದು ಅಭ್ಯಾಸವಿದೆ. ಹತ್ತಿರದಲ್ಲಿ ಮೂರ್ತಿ ಕುಟುಂಬ ಇದೆ. ಬೇರೆ ನೆಂಟರಿದ್ದಾರೆ. ನೀನು ಹೋಗಬೇಕು’’ ಎಂದಿದ್ದರು. ಅಷ್ಟು ಜೀವನಪಾಠ ಕೇಳಿಸಿಕೊಂಡು ಇಲ್ಲಿಗೆ ಬಂದ ತಾನು ಯಃಕಶ್ಚಿತ್ ಹಲ್ಲಿಗೆ ಹೆದರಿ ರೂಮಲ್ಲಿಯೇ ಲಾಕ್‌ಡೌನ್ ಆಗ್ತಿರೋದನ್ನ ಅಪ್ಪನ ಬಳಿ ಹಂಚಿಕೊಳ್ಳಲಾಗುತ್ತದೆಯೇ? ಇಷ್ಟಕ್ಕೂ ಹಲ್ಲಿಯಿಂದ ಮನಃಶಾಂತಿ ಹಾಳಾಗುತ್ತಿದೆಯೆಂದರೆ ಯಾರಾದರೂ ನಗುತ್ತಾರೆ. ಹಂಚಿ ಹಗುರಾಗಲು ಸಾಧ್ಯವಿಲ್ಲದ ವಿಷ ನುಂಗಿಕೊಳ್ಳುತ್ತಾ ರಾಜೇಶ ಒದ್ದಾಡಿದ.

ಒಂದೆರಡು ವಾರಗಳು ಹೀಗೇ ಕಳೆದವು. ಹಲ್ಲಿ ಕಾಣಿಸಿಕೊಳ್ಳದಿದ್ದರೂ ಆಗಾಗ ಅದರ ಹಿಕ್ಕೆ,